# ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ

2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 785

ಉತ್ತರಿಸಬೇಕಾದ ದಿನಾಂಕ : 17-09-2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕುದೂರು ಹೋಬಳಿ ಬಿಸ್ಕೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 2021-22ನೇ ಸಾಲಿನಲ್ಲಿ ಕಾ:ಸಂಖ್ಯೆ:1529003007:ಡಬ್ಲ್ಯೂಸಿ?923833610, ಕುಪ್ಪೇಪಾಳ್ಯ ಗ್ರಾಮದಲ್ಲಿ ತೊರೆ ಅಭಿವೃದ್ಧಿ ಕಾಮಗಾರಿಯನ್ನು ಜೆ.ಸಿ.ಬಿ ಯಂತ್ರದಿಂದ ಮಾಡಿಸಿರುವುದು ಸರಿಯೇ; ಕಾರ್ಮಿಕರಿಂದ ಕಾಮಗಾರಿಯನ್ನು ಮಾಡಿಸುವ ಬಗ್ಗೆ ಸರ್ಕಾರಿ ಆದೇಶವಿದ್ದರೂ ಸಹ ಅದನ್ನು ಲೆಕ್ಕಿಸದೇ ಜೆ.ಸಿ.ಬಿ ಯಂತ್ರದಿಂದ ಮಾಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2021-22ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ದಿನಾಂಕ: 03/07/2021ರಿಂದ 05/08/2021ರವರೆಗೆ 3 ಎನ್.ಎಮ್.ಆರ್ ಗಳನ್ನು ತೆಗೆದಿದ್ದು 122247/- ಮೊತ್ತವನ್ನು ಕೂಲಿ ಕಾರ್ಮಿಕರ ಖಾತೆಗೆ ಪಾವತಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಜೆ.ಸಿ.ಬಿ ಯಂತ್ರದಿಂದ ಮಾಡಿರುವುದಿಲ್ಲ,<br>1) ಎನ್ ಎಂ ಆರ್ ಸಂಖ್ಯೆ 7783 ರಲ್ಲಿ 65603 ರೂ<br>2) ಎನ್ ಎಂ ಆರ್ ಸಂಖ್ಯೆ 5003 ರಲ್ಲಿ 16184 ರೂ<br>3) ಎನ್ ಎಂ ಆರ್ ಸಂಖ್ಯೆ 5002 ರಲ್ಲಿ 40460 ರೂ |
| ಆ) | ಈ ಹಗರಣದಲ್ಲಿ ಕೂಲಿ ಕಾರ್ಮಿಕರಿಂದ ಕಾಮಗಾರಿ ಮಾಡಿಸದೆ ಜೆ.ಸಿ.ಬಿಯಿಂದ ಮಾಡಿಸಿದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; | ಸದರಿ ಕಾಮಗಾರಿಗೆ ಪಾವತಿ ಮಾಡಿರುವ 122247/- ಮೊತ್ತವು ಕೂಲಿಕಾರ್ಮಿಕರಿಂದಲೇ ಕೆಲಸ ಮಾಡಿಸಿದ್ದು ಅವರ ಖಾತೆಗೆ ಹಣ ಜಮೆಯಾಗಿರುತ್ತದೆ. ಜೆ.ಸಿ.ಬಿ ಯಂತ್ರ ಬಳಸಿ ಕಾಮಗಾರಿ ಮಾಡಿಸಿರುವುದಿಲ್ಲ. |
| ಇ) | ಸದರಿ ಪಂಚಾಯತಿ ವ್ಯಾಪ್ತಿಯಲ್ಲಿ 2018-19ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಸಾಮಾಗ್ರಿ ಮೊತ್ತವು ಇಲ್ಲಿಯವರೆಗೂ ಬಿಡುಗಡೆಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಿಡುಗಡೆ ಮಾಡುವಲ್ಲಿ ಆದ ವಿಳಂಬಕ್ಕೆ ಕಾರಣವೇನು; | 2018-19 ನೇ ಸಾಲಿನಲ್ಲಿ ಬಿಸ್ಕೂರು ಗ್ರಾಮ ಪಂಚಾಯಿತಿಯಲ್ಲಿ 67.20 ಲಕ್ಷ ಸಾಮಗ್ರಿ ಮೊತ್ತ ಬಾಕಿ ಇರುತ್ತದೆ. 2018-19ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯು ಸಾಮಗ್ರಿ ಅನುಪಾತ (ಸಾ.ಅ 44.32%) ಉಲ್ಲಂಘಿಸಿರುವುದರಿಂದ, ಕೇಂದ್ರ ಸರ್ಕಾರವು Material list Generation Lock ಮಾಡಿದ್ದು, ಬಿಸ್ಕೂರು ಗ್ರಾಮ ಪಂಚಾಯತಿ ಸೇರಿದಂತೆ ರಾಮನಗರ ಜಿಲ್ಲೆಯ 2018-19ನೇ ಸಾಲಿನ ಸಾಮಗ್ರಿ ಬಿಲ್ ಪಾವತಿಸುವುದು ಬಾಕಿ ಉಳಿದಿರುತ್ತದೆ. |
| (ಈ) | ಸದರಿ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ವಾಟರ್‌ಮ್ಯಾನ್‌ಗಳಿಗೆ ಕಳೆದ 10 ತಿಂಗಳುಗಳಿಂದ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣವೇನು? | ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲದಿಂದ ಏಪ್ರಿಲ್ ಮತ್ತು ಮೇ ತಿಂಗಳ ವೇತನ ರೂ 372267/-ಗಳನ್ನು ಪಾವತಿ ಮಾಡಿದ್ದು ಬಾಕಿ ಪಾವತಿ ವೇತನವನ್ನು ಪಂಚಾಯಿತಿ ಸಂಪನ್ಮೂಲ ಕ್ರೋಢೀಕರಿಸಿ ಹಂತಹಂತವಾಗಿ ಪಾವತಿಗೆ ಕ್ರಮವಹಿಸಲಾಗುವುದು. |

ಸಂಖ್ಯೆ: ಗ್ರಾಅಪ 61(5) ಉಖಾಯೋ 2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು